ತೆಗೆದುಕೊಂಡಿದ್ದಾರೋ ಇಲ್ಲವೋ ಎನ್ನುವುದನ್ನು ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ. ಆದಷ್ಟು ಬೇಗನೆ ವರದಿ ತರಿಸಿ, ಅವರು ಪರವಾನಗಿ ತೆಗೆದುಕೊಳ್ಳದೇ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಸಾ. ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸಲು ಸಂಸ್ಥೆಯ ವಿಭಜನೆ

189 (865): ಶ್ರೀ ಕೆ.ಹೆಚ್. ಹನುಮೇಗೌಡ, (ಹಾಸನ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸಲು ಸದರಿ ಸಂಸ್ಥೆಯನ್ನು ನಾಲ್ಕು ವಲಯಗಳನ್ನಾಗಿ ಪರಿಗಣಿಸಬೇಕೆಂಬ ಸರ್ಕಾರದ ಆಲೋಚನೆ ಯಾವ ಹಂತದಲ್ಲಿದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಅಧ್ಯಕ್ಷರೇ, ಕರ್ನಟಾಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸಲು ಮತ್ತು ಸದರಿ ಸಂಸ್ಥೆಯನ್ನು 4 ವಲಯಗಳನ್ನಾಗಿ ವಿಂಗಡಿಸಬೇಕೆಂಬ ಸರ್ಕಾರದ ಆಲೋಚನೆ ಯಾವ ಹಂತದಲ್ಲಿದೆ ಎಂದು ಕೇಳಿದ್ದಕ್ಕೆ ಇದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ. ಕಳೆದ ಅನೇಕ ವರ್ಷಗಳಿಂದ ಇದೇ ಮಾತನ್ನು ಹೇಳುತ್ತಿದ್ದಾರೆ. ಇದಕ್ಕೆ ಏನಾದರೊಂದು ಸಮಿತಿ ಮಾಡಿ, ಅವರಿಂದ ಮಾಹಿತಿ ಪಡೆದು ಇದರ ಬಗ್ಗೆ ಕಾರ್ಯಪ್ರವೃತ್ತರಾಗುತ್ತೀರಾ ? ಅಥವಾ ಸುಮ್ಮನೆ ಪರಿಶೀಲನೆಯಲ್ಲಿದೆ ಎಂದು ಎಷ್ಟು ವರ್ಷ ಹೀಗೆಯೇ ಹೇಳಿಕೊಂಡು ಹೋಗುತ್ತೀರಿ ? ಮಾಡುವುದಾದರೆ ಎಷ್ಟು ದಿವಸದಲ್ಲಿ ಮಾಡುತ್ತೀರಾ ಎಂಬುದನ್ನು ದಯಮಾಡಿ ತಿಳಿಸಿ ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಸಾರಿಗೆ ಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಹಿಂದೆ ದೊರೈರಾಜು ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಗಿತ್ತು. ಅವರು ಕೂಲಂಕುಷವಾಗಿ ಪರಿಶೀಲನೆ ಮಾಡಿ ಕೆಲವು ಸಲಹೆಗಳನ್ನು ಕೊಟ್ಟರು, ಇದಾದ ನಂತರ, ಅದನ್ನು ತಜ್ಞರ ಸಮಿತಿಗೆ ಕಳುಹಿಸಿ, ಅವರೂ ಕೂಡ ಇದರ ಬಗ್ಗೆ ಪರಿಶೀಲನೆ ಮಾಡಿ, ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈಗ, ಇದನ್ನು ಸಚಿವ ಸಂಪುಟದ ಉಪಸಮಿತಿ ಪರಿಶೀಲನೆ ಮಾಡುತ್ತಿದೆ. ಆದಷ್ಟು ಬೇಗನೆ ಪರಿಶೀಲನೆ ಮಾಡಿ, ಏನು ಮಾಡಬೇಕೆಂದು ತೀರ್ಮಾನ ಮಾಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಗ್ರಾಮಂತರ ಪ್ರದೇಶಗಳಲ್ಲಿ ಬಸ್ ಪ್ರಯಾಣ ಮಾಡುವುದು ಬಹಳ ದೊಡ್ಡ ಸಾಧನೆ. ಬಸ್ ಹೊರಟ ಜಾಗದಲ್ಲಿಯೇ ಸೀಟುಗಳು ಭರ್ತಿಯಾಗುತ್ತವೆ. ಅಲ್ಲಿಂದ ಸಂಬಂಧಪಟ್ಟ ಸ್ಥಳಕ್ಕೆ ಬರಬೇಕಾದರೆ, ಬಸ್ ಮೇಲೆ ಕುಳಿತುಕೊಂಡು, ಏಣಿ ಮೇಲೆ ಕುಳಿತುಕೊಂಡು ಜನರು ಪ್ರಯಾಣ ಮಾಡುತ್ತಿದ್ದಾರೆ.

ಅವರ ಪರಿಸ್ಥಿತಿಯನ್ನು ನೋಡಿದರೆ ನೋಡಿದವರಿಗೆ ಏನು ಆನಿಸುತ್ತದೆ. ಅವರ ಪಾಡು ಹೇಳುವುದಕ್ಕೆ ಆಗುವುದಿಲ್ಲ. ಅವರನ್ನು ನೋಡಿದರೆ ನೋವಾಗುತ್ತದೆ. ಆ ಹೆಂಗಸರು ಮಕ್ಕಳು ಬಸ್ಸಿನಲ್ಲಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನೊಂದು ಏನಾಗುತ್ತದೆ ಅಂದರೆ ಪಟ್ಟಣಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಓದುವಂತಹ ಮಕ್ಕಳಿಗೆ ಪಾಸ್‌ಗಳನ್ನು ಬೇರೆ ಕೊಟ್ಟಿದ್ದೀರಿ. ಬಸ್ಸು ಹೊರಡುವ ಜಾಗದಲ್ಲೇ ಬಸ್ಸು ತುಂಬಿರುವಾಗ ಮಧ್ಯದಲ್ಲಿ ಮಕ್ಕಳಿಗೆ ಸೀಟು ಸಿಗುವುದಿಲ್ಲ. ಹುಡುಗರು ಬೆಳಿಗ್ಗೆಯಿಂದ ಬಸ್ಸಿಗಾಗಿ ನಿಂತು ವಾಪಸ್ ಹೋಗುತ್ತಾರೆ. ಅವರ ತಂದೆ ತಾಯಿಗಳು ನಮ್ಮ ಹುಡುಗ

ತುಂಬಾ ಚೆನ್ನಾಗಿ ಓದುತ್ತಿದ್ದಾನೆಂದು ತಿಳಿದುಕೊಳ್ಳುತ್ತಾರೆ. ಇದರಿಂದ ದೊಡ್ಡ ಘೋರ ಅಪರಾಧವಾಗುತ್ತದೆಂದು ನಾನು ಸರ್ಕಾರವನ್ನು ಮುಂಚಿಯೇ ಎಚ್ಚರಿಸುತ್ತಿದ್ದೇನೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಮಕ್ಕಳ ವಿದ್ಯಾಭ್ಯಾಸ ಸರ್ವನಾಶವಾಗಿದೆ. ಪಾಸ್ ಬೇರೆ ಕೊಟ್ಟಿದ್ದೀರಿ. ಪಾಸ್ ಕೊಡಬಾರದು ಎಂದು ನಾನು ಹೇಳುತ್ತಿಲ್ಲ. ಅದಕ್ಕೆ ತಕ್ಕ ವ್ಯವಸ್ಥೆ ಕೂಡ ಮಾಡಬೇಕಲ್ಲ. ನಾವು ಹೋದ ಕಡೆಗಳಲ್ಲಿ ಹುಡುಗರು ಇದೇ ದೂರು ಹೇಳುತ್ತಾರೆ. ಹೆಂಗಸರು ಮಕ್ಕಳು ಒಂದು ಕಡೆ ದೂರು ಕೊಡುತ್ತಾರೆ. ಇನ್ನೊಂದು ಕಡೆ ಪಾಸ್ ಕೊಟ್ಟ ಹುಡುಗರ ದೂರು. ಇಷ್ಟೊಂದು ಅದ್ವಾನವಾಗಿರುವುದರಿಂದ ತಾವು ನಡೆಸಲಿಕ್ಕೆ ಇಲ್ಲೆಲ್ಲಿ ಸಾಧ್ಯ ಅಲ್ಲಿ ನಡೆಸಿ, ಎಲ್ಲೆಲ್ಲಿ ಸಾಧ್ಯವಿಲ್ಲ ಅಲ್ಲಿ ಪ್ರೈವೇಟ್‌ನವರಿಗೆ ಕೊಟ್ಟು ಏನಾದರೂ ವ್ಯವಸ್ಥೆ ಮಾಡುತ್ತೀರಾ ? ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಾರ್ಯಕ್ರಮದಲ್ಲಿ ಎಫಿಷಿಯನ್ಸಿ ಜಾಸ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಇವತ್ತು ಗ್ರಾಮಾಂತರ ಪ್ರದೇಶದ ಪ್ರಯಾಣಿಕರಿಗೆ ನರಕವಾಗಿದೆ. ದಯವಿಟ್ಟು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಾರಿಗೆ ಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಹನುಮೇಗೌಡರು ಹೇಳತಕ್ಕಂಥದ್ದು ಅನುಭವ ಮತ್ತು ನಿಜವಾದಂಥಹ ಅಂಶ. ಜನಗಳಿಗೆ ತುಂಬಾ ತೊಂದರೆ ಆಗಿದೆ. ಆ ದೃಷ್ಟಿಯಿಂದ ಇದನ್ನು ನಾವು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ. ಇದರಲ್ಲಿ ಪುನಃ ಕೆಲವು ಅಂಶಗಳನ್ನು ಅಧ್ಯಯನ ಮಾಡುವುದಕ್ಕೆ ಇಲಾಖೆಗೆ ಸೇರಿರತಕ್ಕಂಥ ಅಧಿಕಾರಿ ವರ್ಗದವರನ್ನು ಸೇರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಆದಷ್ಟು ಬೇಗ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ ಅವರು ಹೇಳಿದಂತೆ ಇದು ಬಹಳ ಗಂಭೀರವಾಗಿದೆ ಆದಷ್ಟು ಬೇಗ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

ದಿನಕರ್ ಸಮಿತಿ ವರದಿಯ ಅನುಷ್ಠಾನ

190 (348): ಶ್ರೀ ಆರ್. ದಯಾನಂದರಾವ್ (ಗಾಂಧಿನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದ ಸಂಚಾರವನ್ನು ಉತ್ತಮ ಪಡಿಸುವ ಬಗ್ಗೆ ಶ್ರೀ ದಿನಕರ್‌ರವರ ನೇತೃತ್ವದಲ್ಲಿ ರಚಿಸಲಾದ ಸಮಿತಿಯು ವರದಿಯನ್ನು ಕೊಟ್ಟಿದೆಯೆ ?

ಆ. ಹಾಗಿದ್ದಲ್ಲಿ, ಈ ವರದಿಯ ಮೇಲೆ ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು ?

ಇ. ಶಿಫಾರಸ್ಸಿನನ್ವಯ ಅನುಷ್ಠಾನಕ್ಕೊಳಪಡಿಸಬಹುದಾದ ಮೊಬಲಗು ?

ಈ. ಬೆಂಗಳೂರು ನಗರದಲ್ಲಿ ಸಂಚಾರ ತೊಂದರೆಗಳನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ವೀರಪ್ಪ ಮೊಯಲಿ (ಮುಖ್ಯಮಂತ್ರಿಗಳು):–

ಅ. ಸಮಿತಿ ಯಾವುದನ್ನೂ ರಚಿಸಿರುವುದಿಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಬೆಂಗಳೂರು ನಗರ ಸಂಚಾರಿ ತೊಂದರೆಗಳನ್ನು ಉತ್ತಮಪಡಿಸಲು ಸರ್ಕಾರ ಹಲವು